ಎಲ್ ಎ ಸಿ ನಂಃ 2/2014
ಪಿ.ಡಬ್ಲೂ.2

<u>ದಿನಾಂಕಃ**13-12-2022** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು</u>

<u>ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ-</u>

ದಿಃ08/12/2021 ರ ಹಿರಿಯ ಸಹಾಯಕ ನಿರ್ದೇಶಕರು, ತರೀಕೆರೆಯವರು ಕೊಟ್ಟ ದಾಖಲೆ ಹಾಜರುಪಡಿಸಿದ್ದು, ಅದನ್ನು ನಿಪಿ-45 ಎಂದು, ಎ ಪಿ ಎಂ ಸಿ, ತರೀಕೆರೆ ಯವರು ಕೊಟ್ಟ ದಾಖಲೆ ನಿಪಿ-46 ಎಂದು, ತೋಟಗಾರಿಕಾ ಬೆಳೆಗಳ ಮೌಲ್ಯಮಾಪನ ಪತ್ರ ನಿಪಿ-47 ಎಂದು, ತರೀಕೆರೆಯ ಉಪನೊಂದಣಾಧಿಕಾರಿಗಳು ಕೊಟ್ಟ ಎಸ್ ಆರ್ ವ್ಯಾಲ್ಯು ಪತ್ರ ಹಾಜರುಪಡಿಸಿದ್ದು, ಅದನ್ನು ನಿಪಿ-48 ಎಂದು ಗುರುತಿಸಲಾಯ್ತು.

<u>ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ-</u>

ನಿಮ್ಮ ತಂದೆ ಪ್ರಮಾಣಪತ್ರದಲ್ಲಿ 10 ಎಕರೆ ನಿಮ್ಮ ಪ್ರಮಾಣಪತ್ರದಲ್ಲಿ 12 ಎಕರೆ ಮಾಲೀಕರೆಂದು ಬರೆದಿದ್ದೀರಿ ಎಂದರೆ ಸಾಕ್ಷಿದಾರರು 12 ಎಕರೆ ಅನ್ನುತ್ತಾರೆ. ಅಡಿಕೆ ತೋಟ ಇರಲಿಲ್ಲ ಎಂದರೆ ಸರಿಯಲ್ಲ. ನಮಗೆ 20 ಎಕರೆ ಜಮೀನು ಇರುವುದಿಲ್ಲ. 3 ಎಕರೆ 25 ಗುಂಟೆ ಭೂ ಸ್ವಾಧೀನ ಆಗಿದೆ. ಪ್ರತೀ ವರ್ಷ 3 ಲಕ್ಷ ತೋಟವನ್ನು ಅಬಿವೃದ್ದಿಪಡಿಸಲು ಹಣ ಉಪಯೋಗಿಸಿದ್ದೇವೆಂದು ಸುಳ್ಳು ಹೇಳುತ್ತಿದ್ದೇವೆಂದರೆ ಸರಿಯಲ್ಲ. 6 ಲಕ್ಷ ಆದಾಯ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಜಮೀನಿನ ಮಧ್ಯದಲ್ಲಿ ಚಾನಲ್ ಹಾದುಹೋಗಿದೆ ಅಂತ ಸುಳ್ಳು ಹೇಳಿದ್ದೇನೆಂದರೆ ಸರಿಯಲ್ಲ, ಈ ಬಗ್ಗೆ ನಕ್ಷೆ ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಉಳಿದ ಜಮೀನಿನಲ್ಲಿ ಮೊದಲು ಅಡಿಕೆ ಇತ್ತು. ಈಗ ಅದು ಹಾಳಾಗಿ ಹೋಗಿದೆ. ಸಮೃದ್ದವಾಗಿ ಬೆಳೆಯುತ್ತಿದೆ ಎಂದು ಹೇಳಿಕೆ ನೀಡಿ ಈಗ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ವಿದ್ಯುತ್ ಚ್ಚಕ್ತಿ ಅಳವಡಿಸಿಲ್ಲ ಎಂದರೆ ಸರಿಯಲ್ಲ. ಕೊಳವೆ ಬಾವಿ ಹಾಳಾಗಿವೆ ಅಂತ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸ್ವಾದೀನಗೊಂಡ ಜಾಗದಲ್ಲಿ ಮರ ಹಾಗೂ ಕಟ್ಟಡ ಇತ್ತೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 2800 ಅಡಿಕೆ ಗಿಡಗಳು ಹಾಳಾಗಿರುತ್ತವೆ. ನಮ್ಮ ತಂದೆ ಪ್ರಮಾಣಪತ್ರದಲ್ಲಿ 1890 ಎಂದು ಹೇಳಲಾಗಿದೆ ಎಂದರೆ ಸರಿಯಲ್ಲ. ಫಾರ್ಮ್ ಹೌಸ್ ಕಟ್ಟಿದ್ದೆವೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅಡಿಗೆ 50 ರೂ. ಬೆಲೆ ಬಾಳುತ್ತಿತ್ತು ಎಂದು ಸುಳ್ಳು

ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತೀ ಎಕರೆಗೆ 70 ಲಕ್ಷ ರೂ. ಬಾಳುತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 3 ಕೋಟಿ 45 ಲಕ್ಷ ಬರುತಿತ್ತೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಮಾರುಕಟ್ಟೆ ಬೆಲೆಗೆ ಅನುಗುಣವಾಗಿ 1 ನೇ ಎದುರುದಾರರು ಹಣ ಕೊಟ್ಟಿದ್ದಾರೆಂದರೆ ಸರಿಯಲ್ಲ. ನಿಪಿ-1 ರಿಂದ 3 ನ್ನು 4(1) ನೋಟೀಫಿಕೇಷನ್ ಆದ ನಂತರ ಸೃಷ್ಟಿ ಮಾಡಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ನಮ್ಮ ಜಮೀನುಗಳು ಖುಷ್ಕಿ ಜಮೀನುಗಳೆಂದರೆ ಸರಿಯಲ್ಲ. ನಿಪಿ-47 ಈ ಪ್ರಕರಣದಲ್ಲಿ ಒಳಗೊಂಡಿರುವ ಸರ್ವೆ ನಂಬರಿಗೆ ಸಂಬಂದಿಸಿದ್ದಲ್ಲ ಎಂದರೆ ಸರಿಯಲ್ಲ. ನಿಪಿ-45, 46 ಕೂಡಾ 4(1) ನೋಟೀಫಿಕೇಷನ್ ಆದ ನಂತರ ಸೃಷ್ಟಿ ಮಾಡಿಕೊಳ್ಳಲಾಗಿದೆ ಎಂದರೆ ಸರಿಯಲ್ಲ.

(1 ನೇ ಎದುರುದಾರರ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿದ್ದಾರೆ)

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

Sd/-

**(**ಎಂ ಸಿ ನಂಜೇಗೌಡ**)**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾದಂ., ರವರ ನ್ಯಾಯಾಲಯ, ತರೀಕೆರೆ.